# ಕರ್ನಾಟಕ ಸರ್ಕಾರ

ಆರ್.ಡಿ./60/ಎಂಆರ್‌ಆರ್/2007(2)

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮ್ಮಡಿಗಳ ಕಟ್ಟಡ ಬೆಂಗಳೂರು.
ದಿನಾಂಕ: 06-10-2008

## ಸುತ್ತೋಲೆ

**ವಿಷಯ:-** ನೆಮ್ಮದಿ ಮೂಲ ಡಾಟದಲ್ಲಿ ಕೈಬಿಟ್ಟ/ಕಾಗುಣಿತ ಅಕ್ಷರ ತಪ್ಪಾಗಿರುವ ಗ್ರಾಮ ಮತ್ತು ಜಾತಿಯ ಹೆಸರು ಸರಿಪಡಿಸುವ ಕುರಿತು.

*******

ತಾಲ್ಲೂಕು ಕಛೇರಿಗಳು ಮತ್ತು ಹೋಬಳಿ ಕೇಂದ್ರದ ಗ್ರಾಮಗಳಲ್ಲಿ ನೆಮ್ಮದಿ ಯೋಜನೆಯನ್ನು ಜಾರಿಗೊಳಿಸಿ ಈಗಾಗಲೇ ಒಂದು ವರ್ಷವೇ ಕಳೆದಿದೆ. ಸರ್ಕಾರಿ ಸೇವೆಗಳನ್ನು ಹೋಬಳಿ ಮಟ್ಟಕ್ಕೆ ವಿಕೇಂದ್ರೀಕರಿಸುವುದಕ್ಕೆ ಪೂರಕವಾಗುವಂತೆ ಗ್ರಾಮೀಣ ಟೆಲಿಸೆಂಟರುಗಳನ್ನು ಸರ್ಕಾರಿ ಕಛೇರಿಗಳಂತೆಯೇ ರೂಪಿಸಲಾಗಿದೆ. ಈ ಗ್ರಾಮೀಣ ಟೆಲಿ ಸೆಂಟರುಗಳು ಸರ್ಕಾರದಿಂದ ನಾಗರೀಕರಿಗೆ ಒದಗಿಸಲಾಗುವ ಸೇವೆಗಳನ್ನು ತಲುಪಿಸಲು ನೆರವಾಗುತ್ತವೆ. ಕಂದಾಯ ಇಲಾಖೆಯಿಂದ ಒದಗಿಸಲಾಗುವ ಜನನ-ಮರಣ ದಾಖಲೆಗಳು, ಜಾತಿ, ಆದಾಯ ದೃಢೀಕರಣಗಳು,ವೃದ್ಧಾಪ್ಯ ವೇತನಗಳು ಮೊದಲಾದ 39 ರೀತಿಯ ಸೇವೆಗಳನ್ನು ಒದಗಿಸಲು ಈ ಟೆಲಿ ಸೆಂಟರುಗಳು ಸನ್ನದ್ಧವಾಗಿವೆ.

ಕೆಲವು ತಾಲ್ಲೂಕುಗಳಲ್ಲಿ ನೆಮ್ಮದಿ ಯೋಜನೆಯಡಿ ನೀಡುತ್ತಿರುವ ದೃಢೀಕರಣ ಪತ್ರಗಳಲ್ಲಿ ಗ್ರಾಮದ ಹೆಸರು ಮತ್ತು ಜಾತಿಯ ಹೆಸರು ಕೈಬಿಟ್ಟಿರುವುದು ಅಥವಾ ಕಾಗುಣಿತ ಅಕ್ಷರ ತಪ್ಪಾಗಿರುವುದು ಗಮನಿಸಲಾಗಿದೆ. ಇದರಿಂದ ನಾಗರೀಕರಿಗೆ ಅನಾನುಕೂಲವಾಗುತ್ತಿದೆ.

ನೆಮ್ಮದಿ ಮೂಲ ಡಾಟದಲ್ಲಿ ಕೈಬಿಟ್ಟ/ಕಾಗುಣಿತ ಅಕ್ಷರ ತಪ್ಪಾಗಿರುವ ಗ್ರಾಮ ಮತ್ತು ಜಾತಿಯ ಹೆಸರು ಸರಿಪಡಿಸುವುದಕ್ಕೆ ಸಂಬಂಧಿಸಿದ ತಹಸೀಲ್ದಾರರು ಪ್ರಥಮ ಆಧ್ಯತೆ ಮೇರೆಗೆ ಕ್ರಮ ಕೈಗೊಳ್ಳಬೇಕಾಗಿರುತ್ತದೆ.

ಮೇಲೆ ತಿಳಿಸಿದಂತೆ ಸರಿಪಡಿಸುವ ಕೋರಿಕೆಗಳನ್ನು ತಕ್ಷಣ, ನಿರ್ದೇಶಕರು, ಇಡಿಸಿಎಸ್ ನಿರ್ದೇಶನಾಲಯ(ನೆಮ್ಮದಿ ಯೋಜನೆ), ಕೊಠಡಿ ಸಂಖ್ಯೆ: 110, 2ನೇ ಗೇಟ್, 1ನೇ ಮಹಡಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು 560001 ದೂರವಾಣಿ: 080-22370282, ಇವರಿಗೆ ಕಳಿಸಬೇಕಾಗಿ ಸೂಚಿಸಿದೆ.

(ರಾಜೀವ್ ಚಾವ್ಲಾ)
ಸರ್ಕಾರದ ವಿಶೇಷ ಕಾರ್ಯದರ್ಶಿಗಳು (ಭೂಮಿ)
ಬೆಂಗಳೂರು.

ಗೆ,

ಎಲ್ಲಾ ಜಿಲ್ಲಾಧಿಕಾರಿಗಳು.

ಪ್ರತಿ:

1. ನಿರ್ದೇಶಕರು, ಇಡಿಸಿಎಸ್ ನಿರ್ದೇಶನಾಲಯ(ನೆಮ್ಮದಿ ಯೋಜನೆ), ಬೆಂಗಳೂರು
2. ಎಲ್ಲಾ ತಹಸೀಲ್ದಾರರಿಗೆ ಜಿಲ್ಲಾಧಿಕಾರಿಗಳ ಮೂಲಕ.